5. ಈ ಸಂಬಂಧ ಅಧಿಸೂಚನೆ ಸಂಖ್ಯೆ:ಸಿಆತಸು೧-64-ಸೇನಿ೧-96 ದಿನಾಂಕ 29.3.97 ರನ್ವಯ ವಿಶೇಷ ಕರಡು ನಿಯಮಾವಳಿಗಳನ್ನು ರಚಿಸಲಾಗಿದೆ. ಸದರಿ ನಿಯಮಾವಳಿಗಳನ್ನು ಅಂತಿಮಗೊಳಿಸಬೇಕಾಗಿದ್ದು. ಅದು ಪರಿಶೀಲನೆಯಲ್ಲಿದೆ.

6. ಪ್ರಶ್ನೆ 5ಕ್ಕೆ ಎದುರಾಗಿ ನೀಡಿರುವ ಉತ್ತರಗಳ ಹಿನ್ನಲೆಯಲ್ಲಿ ತಿದ್ದುಪಡಿ ಆದೇಶ ಅಂತಿಮಗೊಂಡ ನಂತರ ಈ ಅಂಶವನ್ನು ಪರಿಶೀಲಿಸಬೇಕಾಗಿದೆ.

7. ಈ ಸಂಬಂಧ ಅಧಿಸೂಚನೆ ಸಂಖ್ಯೆ:ಸಿಆತಸು೧-64-ಸೇನಿ೧-96 ದಿನಾಂಕ 29.3.97ರನ್ವಯ ವಿಶೇಷ ಕರಡು ನಿಯಮಾವಳಿಗಳನ್ನು ರಚಿಸಲಾಗಿದೆ. ಸದರಿ ನಿಯಮವಳಿಗಳನ್ನು ಅಂತಿಮಗೊಳಿಸಬೇಕಾಗಿದ್ದು, ಅದು ಪರಿಶೀಲನೆಯಲ್ಲಿದೆ.

8. ಮೇಲಿನ ಉತ್ತರ ಇದಕ್ಕೂ ಅನ್ವಯಿಸುತ್ತದೆ.

ರಾಜ್ಯದಲ್ಲಿರುವ ಗ್ರಾಮ ಪಂಚಾಯ್ತಿ ಅಧ್ಯಕ್ಷ ಉಪಾಧ್ಯಕ್ಷರ ಕಾಲವಧಿ

421 (769) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರ ಪೇಟೆ): ಮಾನ್ಯ ಗ್ರಾಮೀಣಾಭಿವೃದ್ದಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿರುವ ಒಟ್ಟು ಗ್ರಾಮ ಪಂಚಾಯತಿಗಳ ಸಂಖ್ಯೆ ಎಷ್ಟು ; ಅಧ್ಯಕ್ಷ ಉಪಾಧ್ಯಕ್ಷರ ಸೇವಾವಧಿ ವಿವರ ನೀಡಿ; ಸೇವಾ ಅವಧಿಯ ಸಮಯವನ್ನು ಯಾವ ಮಾನದಂಡದ ಮೇಲೆ ನಿಗಧಿಪಡಿಸಲಾಗುವುದು;

2. ಗ್ರಾಮ ಪಂಚಾಯತಿಗಳಿಗೆ ನೇರವಾಗಿ ಅಧಿಕಾರ ಮತ್ತು ಅನುದಾನವನ್ನು ಹೆಚ್ಚಿಸುವುದು ಸರ್ಕಾರದ ಪರಿಶೀಲನೆಯಲ್ಲಿದೆಯೇ;

3. ಈ ಸದಸ್ಯರುಗಳಿಗೆ ಗೌರವಧನ, ಸಭೆಯ ವೇತನವನ್ನು ಹೆಚ್ಚಿಸುವ ವಿಚಾರ ಸರ್ಕಾರದ ಮುಂದಿದೆಯೇ;

4. ಸರ್ಕಾರದಿಂದ ಪಂಚಾಯತ್ ರಾಜ್ ಅಭಿವೃದ್ಧಿಗಾಗಿ ಎಷ್ಟು ಮೊತ್ತದ ಅನುದಾನವನ್ನು 2002-2003ನೇ ಸಾಲಿಗೆ ಮಂಜೂರು ಮಾಡಿ ಬಿಡುಗಡೆಗೊಳಿಸಲಾಗಿದೆ; ಎಷ್ಟು ಬಾಕಿ ಇದೆ; ಜಿಲ್ಲಾವಾರು ವಿವರ ನೀಡುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

1. ರಾಜ್ಯದಲ್ಲಿರುವ ಗ್ರಾಮ ಪಂಚಾಯತ್‌ಗಳ ಸಂಖ್ಯೆ 5659. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 46 ಉಪಪ್ರಕರಣ 1 ರಲ್ಲಿ ನಿಗಧಿಪಡಿಸಿರುವಂತೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸೇವಾವಧಿಯು ಅವರ ಚುನಾವಣೆಯ ದಿನಾಂಕದಿಂದ 30 ತಿಂಗಳುಗಳವರೆಗೆ ಅಥವಾ ಆತನ ಸದಸ್ಯತ್ವ ಮುಗಿಯುವವರೆಗೆ ಇವರೆಡರಲ್ಲಿ ಯಾವುದು ಮೊದಲನೇ ಅಲಿಯವರೆಗೆ ಇರುತ್ತದೆ.

2. ಪರಿಶೀಲನೆಯಲ್ಲಿದೆ

3. ಪರಿಶೀಲನೆಯಲ್ಲಿದೆ

4. ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಅನುಬಂಧ

(ಲಕ್ಷ ರೂ.ಗಳಲ್ಲಿ)

ಕ್ರಮ ಸಂಖ್ಯೆ	ಅನುದಾನಗಳು	ನಿಗದಿಗೊಳಿಸಿರುವ ಅನುದಾನ	ಬಿಡುಗಡೆಗೊಳಿಸಿರುವ ಅನುದಾನ	ಬಾಕಿ ಬಿಡುಗಡೆ ಮಾಡಬೇಕಾದ ಮೊತ್ತ
1.	ಶಾಸನಬದ್ಧ ಅನುದಾನ	11318	2425	8893
2.	ಅಭಿವೃದ್ಧಿ ಅನುದಾನ	9168	1964	7204
3.	ಹನ್ನೊಂದನೇ ಹಣಕಾಸು	7882	-	7882

2002-03ನೇ ಸಾಲಿಗೆ ಬಿಡುಗಡೆಯಾಗಿರುವ ಅನುದಾನಗಳ ಜಿಲ್ಲಾವಾರು ವಿವರ

(ಲಕ್ಷ ರೂ.ಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆಗಳು	ಶಾಸನಬದ್ಧ ಅನುದನ	ಅಭಿವೃದ್ಧಿ ಅನುದಾನ	ಹನ್ನೊಂದನೇ ಹಣಕಾಸು
1	2	3	4	5
1.	ಬೆಂಗಳೂರು (ನಗರ)	48.00	39.27	ಹನ್ನೊಂದನೇ ಹಣಕಾಸು ಯೋಜನೆಯು ಐದು ವರ್ಷಗಳ ಯೋಜನೆಯಾಗಿದ್ದು ಮೊದಲನೇ ಕಂತಿನ ಹಣವನ್ನು 2001-02 ರಲ್ಲಿ ಬಿಡುಗಡೆ ಮಾಡಲಾಗಿದೆ. ಹನ್ನೊಂದನೇ ಹಣಕಾಸಿನ ಎರಡನೇ ಕಂತಿನ ಅನುದಾನವನ್ನು ಸಧ್ಯದಲ್ಲಿಯೇ ಬಿಡುಗಡೆ ಮಾಡಲಾಗುವುದು.
2.	ಬೆಂಗಳೂರು (ಗ್ರಾ)	97.71	79.80	
3.	ಚಿತ್ರದುರ್ಗ	79.29	64.66	
4.	ಕೋಲಾರ	131.57	107.06	
5.	ಶಿವಮೊಗ್ಗ	111.43	89.00	
6.	ತುಮಕೂರು	137.57	110.61	
7.	ದಾವಣಗೆರೆ	98.57	78.76	
8.	ಮೈಸೂರು	101.14	81.47	
9.	ಚಿಕ್ಕಮಗಳೂರು	96.86	78.34	
10.	ದಕ್ಷಿಣ ಕನ್ನಡ	88.29	70.40	
11.	ಹಾಸನ	110.57	89.20	
12.	ಕೊಡಗು	42.43	35.20	
13.	ಮಂಡ್ಯ	99.43	80.22	

1	2	3	4	5
14.	ಚಾಮರಾಜನಗರ	51.86	42.93	
15.	ರಾಯಚೂರು	70.29	57.24	
16.	ಉತ್ತರ ಕನ್ನಡ	88.71	75.73	
17.	ಉಡುಪಿ	62.57	49.93	
18.	ಬೆಳಗಾಂ	207.86	162.00	
19.	ಬಿಜಾಪುರ	85.29	68.21	
20.	ಧಾರವಾಡ	54.43	45.65	
21.	ಬಾಗಲಕೋಟೆ	69.86	57.76	
22.	ಗದಗ	45.43	39.90	
23.	ಹಾವೇರಿ	88.29	71.24	
24.	ಗುಲ್ಬರ್ಗಾ	144.43	115.63	
25.	ಬಳ್ಳಾರಿ	81.00	66.75	
26.	ಬೀದರ್	75.00	60.69	
27.	ಕೊಪ್ಪಳ	57.43	47.00	

ರಾಜ್ಯದ ವಿವಿಧ ಸಾರ್ವಜನಿಕ ಆಸ್ಪತ್ರೆಗಳಿಗೆ ಔಷಧ ಸಾಮಾಗ್ರಿ

422 (770) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರ ಪೇಟೆ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯ ವಿವಿಧ ಸಾರ್ವಜನಿಕ ಆಸ್ಪತ್ರೆಗಳಿಗೆ ವಿತರಿಸುವ ಒಳರೋಗಿ ಔಷಧ ಸಾಮಗ್ರಿ ಹಾಗೂ ಆಹಾರ ಸಾಮಗ್ರಿಗಳಿಗಾಗಿ ಟೆಂಡರನ್ನು ಜಿಲ್ಲಾವಾರು ಕರೆಯುವ ಪದ್ಧತಿ ಜಾರಿಯಲ್ಲಿದೆಯೇ; ಇದರ ಮಾನದಂಡಗಳೇನು;

2. ಈ ಬಗ್ಗೆ ಸಾಮಗ್ರಿ ಸರಬರಾಜು ಮಾಡಲು ಸಾರ್ವಜನಿಕ ಪ್ರಕಟಣೆ ಮಾಡಲಾಗುವುದೇ; ಪ್ರಕಟಣೆ ಮಾಡದಿರುವ ಬಗ್ಗೆ ವರದಿ ಬಂದಿದೆಯೇ;

3. ಆಸ್ಪತ್ರೆಗಳಲ್ಲಿ ಸಾವನ್ನಪ್ಪಿದ ಅನಾಥ ಶವದ ಮರಣೋತ್ತರ ಪರೀಕ್ಷೆಯ ನಂತರ ಶವ ಸಂಸ್ಕಾರಕ್ಕೆ ಒಂದು ಶವಕ್ಕೆ ಸರ್ಕಾರದಿಂದ ಎಷ್ಟು ಹಣ ಬಿಡುಗಡೆ ಮಾಡಲಾಗುತ್ತದೆ. ವಿವರ ನೀಡುವುದು;